# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 251

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಆರ್.ಧರ್ಮಸೇನ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 22.09.2020

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಬಿ.ಪಿ.ಎಲ್ ಕಾರ್ಡ್ ಗಳನ್ನು ಹಂಚಲಾಗಿದೆ; ಎಷ್ಟು ಅರ್ಜಿಗಳು ಇನ್ನು ವಿಲೇವಾರಿಯಾಗಬೇಕಾಗಿದೆ;</td><td>ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಹಂಚಲಾದ ಬಿ.ಪಿ.ಎಲ್ ಕಾರ್ಡುಗಳು ಹಾಗೂ ವಿಲೇವಾರಿಯಾಗಬೇಕಾದ ಅರ್ಜಿಗಳ ವಿವರ ಕೆಳಕಂಡಂತಿದೆ.<br><br><table><tr><th>ಜಿಲ್ಲೆ</th><th>ಹಂಚಲಾದ ಬಿ.ಪಿ.ಎಲ್ ಕಾರ್ಡುಗಳು</th><th>ವಿಲೇವಾರಿಯಾಗಬೇಕಾದ ಅರ್ಜಿಗಳು</th></tr><tr><td>ಮೈಸೂರು</td><td>34,564</td><td>4,373</td></tr><tr><td>ಚಾಮರಾಜನಗರ</td><td>14,943</td><td>1361</td></tr></table></td></tr>
<tr><td>ಆ</td><td>ಬಿ.ಪಿ.ಎಲ್ ಕಾರ್ಡ್ ಗಳನ್ನು ಹೊಸದಾಗಿ ಹಂಚದಿರಲು ಕಾರಣಗಳೇನು; ಸರ್ಕಾರಕ್ಕಿರುವ ಅಡಚಣೆಗಳೇನು;</td><td>ಪಡಿತರ ಚೀಟಿಯನ್ನು ಫಲಾನುಭವಿಗಳಿಗೆ ನೀಡುವ ಮುನ್ನ ಕುಟುಂಬದ ಎಲ್ಲಾ ಸದಸ್ಯರ ಬಯೋಮೆಟ್ರಿಕ್ ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೇ, Covid - 19ರ ಹಿನ್ನೆಲೆಯಲ್ಲಿ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಬಳಸುವುದಕ್ಕೆ ಅಡಚಣೆಯಾದ ಕಾರಣದಿಂದ ಪಡಿತರ ಚೀಟಿಯನ್ನು ಹೊಸದಾಗಿ ನೀಡುವ ಕಾರ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.<br>ಆದ್ಯತಾ ಪಡಿತರ ಚೀಟಿಯನ್ನು (ಪಿ.ಹೆಚ್.ಹೆಚ್) ವಿತರಿಸುವ ಮುನ್ನ ಅರ್ಜಿದಾರರ ಅರ್ಹತೆಯ ಬಗ್ಗೆ ಇಲಾಖೆಯ ಕಾರ್ಯ ನಿರ್ವಾಹಕ ಸಿಬ್ಬಂದಿ ಮುಖಾಂತರ ಸ್ಥಳ ತನಿಖೆಯನ್ನು ನಡೆಸುವುದು ಸಹ ಕಡ್ಡಾಯವಾಗಿರುತ್ತದೆ. ಕೋವಿಡ್ -19 ಸಾಂಕ್ರಾಮಿಕ ರೋಗವು ತೀವ್ರವಾಗಿ ಪಸರಿಸುತ್ತಿರುವುದರಿಂದ ಸುಗಮ ಚಲನವಲನಗಳಿಗೆ ಅಡಚಣೆ ಉಂಟಾಗಿರುವುದರಿಂದ ಆದ್ಯತಾ (ಪಿ.ಹೆಚ್.ಹೆಚ್) ಪಡಿತರ ಚೀಟಿ ವಿತರಣೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿರುತ್ತದೆ.</td></tr>
</table>

| | | |
|---|---|---|
| ಇ | ಎಷ್ಟು ದಿವಸಗಳಲ್ಲಿ ಬಾಕಿ ಅರ್ಜಿದಾರರಿಗೆ ಬಿ.ಪಿ.ಎಲ್ ಕಾರ್ಡ್ ಗಳನ್ನು ಹಂಚಲಾಗುವುದು? | ಕೋವಿಡ್-19 ರ ಸ್ಥಿತಿಗತಿಯನ್ನು ಆಧರಿಸಿ ಸೂಕ್ತ ಸಮಯದಲ್ಲಿ ಕಾರ್ಡುಗಳ ಹಂಚಿಕೆಗೆ ಕ್ರಮ ಜರುಗಿಸಲಾಗುತ್ತದೆ. |

ಆನಾಸ 247 ಡಿಆರ್ ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.